

# ಫ್ರಾನ್ಸ್ ಗಗನದಲ್ಲಿ ರಥಯಾತ್ರೆ

**ಮಂಗಳೂರಿನ ವಿಶೇಷ ವಿನ್ಯಾಸದ ಗಾಳಿಪಟವೊಂದು ಈ ಬಾರಿ ಫ್ರಾನ್ಸ್ ದೇಶದಲ್ಲಿ ನಡೆಯುತ್ತಿರುವ ಗಾಳಿಪಟ ಉತ್ಸವದಲ್ಲಿ ಭಾಗವಹಿಸಲಿದೆ. ಈ ಮೂಲಕ ನಮ್ಮ ನಾಡಿನ ಹಿರಿಮೆಯನ್ನೂ ಬಾನಂಗಳದಲ್ಲಿ ಪ್ರಚುರಪಡಿಸಲಿದೆ.**

**■ ದಿನೇಶ್ ಹೊಳ್ಳ**

ಗಾಳಿಪಟವೆಂದರೆ ಬಾನಿಗೆ ಬಣ್ಣದ ತೋರಣ ಕಟ್ಟಿ ಖುಷಿಪಡುವ ಹವ್ಯಾಸಿ ಕ್ರೀಡೆ. ಅದು ಒಂದು ಸವಾಲು ಕೂಡ! ಒಂದು ಚೌಕದಾಕೃತಿಯ ಪೇಪರ್, ಬಿದಿರು ಕಡ್ಡಿ, ಬಾಲಂಗೋಚಿ ಕಟ್ಟಿ ಸೂತ್ರ ಬಿಗಿದರೆ ನಮ್ಮ ಕನಸುಗಳಂತೆ ಅದನ್ನು ಬಾನಿಗೇರಿಸಬಹುದು. ಗಾಳಿಪಟವನ್ನು ನಮ್ಮ ಬದುಕಿನ ಸಾಂಕೇತಿಕ ರೂಪದಂತೆಯೂ ಕಾಣಬಹುದು. ನಾವು ನಮ್ಮ ಕನಸು, ಭರವಸೆಗಳ ಜೊತೆ ಎಷ್ಟೋ ಎತ್ತರಕ್ಕೆ ಏರಬಹುದು, ಆದರೆ ನಮ್ಮ ಬದುಕಿನ ಸೂತ್ರ ಸರಿ ಇಲ್ಲದಿದ್ದರೆ ಎಲ್ಲೋ ಬಿದ್ದು ಸೋಲಬಹುದು. ಒಮ್ಮೆ ಸೋತಾಗ ಛಲದಿಂದ ಎದ್ದುನಿಂತು ಸರಿಯಾಗಿ ಸೂತ್ರ ಬಿಗಿದರೆ ಮತ್ತೆ ಎತ್ತರಕ್ಕೆ ಏರಬಹುದು.

ಬದುಕಿನ ಸಂದೇಶ ಸಾರುವ ಈ ಗಾಳಿಪಟ ಕ್ರೀಡೆಗೆ ಹಲವು ದೇಶಗಳಲ್ಲಿ ಮನ್ನಣೆ ದೊರೆತಿದೆ. ಏಷ್ಯಾ ಖಂಡದಲ್ಲಿ ಇದ್ದ ಈ ಗಾಳಿಪಟ ಕ್ರೀಡೆ ಯೂರೋಪ್, ಅಮೆರಿಕ, ಆಸ್ಟ್ರೇಲಿಯಾ ದೇಶಕ್ಕೆ ಸಂಚರಿಸಿ ಜಗತ್ತಿನಾದ್ಯಂತ ಗಾಳಿಪಟ ಉತ್ಸವಗಳು ಜರಗುತ್ತಿವೆ. ನಮ್ಮ ದೇಶದಲ್ಲಿ ಉತ್ತರ ಭಾರತದ ಗುಜರಾತ್, ರಾಜಸ್ಥಾನ, ಮುಂಬೈನಲ್ಲಿ ಉತ್ತರಾಯಣ ಹಬ್ಬದಂದು ಗಾಳಿಪಟ ಹಾರಿಸುವ ಕ್ರಮವಿದೆ.

ಗಾಳಿಪಟದ ಈ ನಂಟು ನಮ್ಮ ಕರ್ನಾಟಕಕ್ಕೂ ಉಂಟು. ಸಂಕ್ರಾಂತಿ ಹಬ್ಬದಂದು ಹಲವೆಡೆ ಗಾಳಿಪಟ ಹಾರಿಸುವ ಪದ್ಧತಿ ಈಗಲೂ ಅಲ್ಲಲ್ಲಿ ನಡೆಯುತ್ತಿದೆ. ಈಗ ಇಲ್ಲಿ ಹೇಳಹೊರಟಿರುವುದು ಮಂಗಳೂರಿನ ಗಾಳಿಪಟದ ಬಗ್ಗೆ. ಮಂಗಳೂರಿನ ವಿಶೇಷ ವಿನ್ಯಾಸದ ಗಾಳಿಪಟವೊಂದು ಈ ಬಾರಿ ಫ್ರಾನ್ಸ್ ದೇಶದಲ್ಲಿ ನಡೆಯುತ್ತಿರುವ ಗಾಳಿಪಟ ಉತ್ಸವದಲ್ಲಿ ಭಾಗವಹಿಸುವ ಬಗ್ಗೆ.

ಮಂಗಳೂರಿನ ಅಶೋಕನಗರದ ಬಿ. ಸರ್ವೇಶ್ ರಾವ್ ಅವರಿಗೆ ಬಾಲ್ಯದಿಂದಲೂ ಗಾಳಿಪಟ ಹಾರಿಸುವ ಹವ್ಯಾಸವಿತ್ತು. ಇದೇ ಹವ್ಯಾಸವನ್ನು ಮುಂದುವರಿಸುತ್ತಾ ಹಲವು ಪ್ರಯೋಗಗಳನ್ನು ಮಾಡಿದರು. ಮುಂದೆ, 'ಟೀಮ್ ಮಂಗಳೂರು'

